**<u>ಸಾಕ್ಷಿಯನ್ನು ದಿಃ 23.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದಃ</u>**

ನಾನು ಈ ಅಪಘಾತವನ್ನು ನೋಡಿಲ್ಲವೆಂದರೆ ಸರಿ. ಈ ಅಪಘಾತ ಹೇಗೆ ಆಯಿತು ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲವೆಂದರೆ ಸರಿ. ಅಪಘಾತವಾದ ಸಮಯದಲ್ಲಿ ಕಾರಿನ ಚಾಲಕ ವಿಶ್ವೇಶ್ವರಯ್ಯ ನಗರದಿಂದ ಡಿಪೋ ನಂಃ **45** ಕ್ಕೆ ಹೋಗುತ್ತಿದ್ದು ಕಾರ್ ಚಾಲಕ ಕಾರನ್ನು ನಿಧಾನವಾಗಿ ಹಾಗೂ ಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಕಾರು ಯಶವಂತಪುರ ಕೈಗಾರಿಕಾ ಪ್ರದೇಶದ ಐ.ಟಿ.ಐ ಕಾಲೇಜಿನ ಮುಂದೆ ಹೋಗುತ್ತಿದ್ದಾಗ ನನ್ನ ಮಗ ಒಮ್ಮೆಲೆ ರಸ್ತೆ ದಾಟಲು ಪ್ರಯತ್ನಿಸಿದ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಮಗನ ಜೊತೆ ಇನ್ನೂ 4 ಜನ ಹುಡುಗರು ಇದ್ದರು ಎಂದರೆ ಸರಿ. ನನ್ನ ಮಗನ ಜೊತೆ ಇದ್ದ ಹುಡುಗರಿಗೆ ಯಾವುದೇ ಗಾಯಗಳಾಗಿಲ್ಲವೆಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ರಸ್ತೆ ದಾಟಲು ಪಾದಚಾರಿಗಳಿಗೆ ಯಾವುದೇ ಅವಕಾಶ ಇರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಯಾವುದೇ ಅವಕಾಶ ಇಲ್ಲದೇ ಇದ್ದರೂ ಸಹ ನನ್ನ ಮಗ ರಸ್ತೆ ದಾಟಿ ಒಮ್ಮೆಲೆ ವಾಪಾಸ್ ಬಂದಿದ್ದರಿಂದ ನನ್ನ ಮಗನ ನಿರ್ಲಕ್ಷ್ಯತನದಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನನ್ನ ಮಗ ಕಾರು ಬರುತ್ತಿರುವುದನ್ನು ನೋಡದೇ ದಿಢೀರನೇ ರಸ್ತೆಯಿಂದ ವಾಪಾಸ್ ಬರುವಾಗ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ನನ್ನ ಮಗ ಹಾಗೂ ಆತನ ಜೊತೆಯಲ್ಲಿದ್ದ 4 ಜನ ಹುಡುಗರು ಒಟ್ಟಿಗೆ ನಿಂತಿದ್ದರೆ 4 ಜನರಿಗೂ ಸಹ ಗಾಯವಾಗುತ್ತಿತ್ತು ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಕಾರ್ ಚಾಲಕನ ಯಾವುದೇ ನಿರ್ಲಕ್ಷ್ಯತನ ಇರುವುದಿಲ್ಲವೆಂದರೆ ಸರಿಯಲ್ಲ.

ಈ ಅಪಘಾತದ ಬಗ್ಗೆ ನಾನೇ ದೂರನ್ನು ಕೊಟ್ಟಿರುತ್ತೇನೆ. ಈ ಅಪಘಾತವು ನನ್ನ ಮಗನ ನಿರ್ಲಕ್ಷ್ಯತನದಿಂದ ಸಂಭವಿಸಿದ್ದರೂ ಸಹ ಪೊಲೀಸರ ಜೊತೆ ಶಾಮಿಲಾಗಿ ಕಾರ್ ಚಾಲಕನ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಮಗೆ

ಅನುಕೂಲವಾಗುವ ರೀತಿಯಲ್ಲಿ ಪೋಲೀಸ್ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗನ ಜೊತೆ ಇದ್ದ ಹುಡುಗರಿಗೆ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ. ಈ ಅಪಘಾತದಲ್ಲಿ ನನ್ನ ಮಗನಿಗೆ ತೀವ್ರ ಸ್ವರೂಪವಾದ ಯಾವುದೇ ಗಾಯಗಳು ಆಗಿರಲಿಲ್ಲವೆಂದರೆ ಸರಿಯಲ್ಲ. 1 ನೇ ಎದುರುದಾರರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಬಿ.ಟಿ.ಆರ್ ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನನ್ನ ಮಗ ಮೊದಲ ವರ್ಷದ ಐ.ಟಿ.ಐ ಓದುತ್ತಿದ್ದ. ಅಪಘಾತವಾದ ದಿನ ನನ್ನ ಮಗ ಕಾಲೇಜಿಗೆ ಹೋಗಿದ್ದ. ಕಾಲೇಜಿನ ಹತ್ತಿರ ಈ ಅಪಘಾತ ಆಗಿರುತ್ತದೆ. ಅಪಘಾತವಾದ ನಂತರ ನನ್ನ ಮಗನನ್ನು ಕಾಲೇಜಿನಿಂದ ವಜಾ ಮಾಡಿದ್ದಾರೆ. ನಿ.ಪಿ.17 ರಲ್ಲಿ ಅಪಘಾತದಲ್ಲಿ ನನ್ನ ಮಗ ಗಾಯಗೊಂಡು ಕಾಲೇಜಿಗೆ ಬರದೇ ಇದುದ್ದರಿಂದ ವಜಾ ಮಾಡಿದ್ದಾರೆಂದು ಹೇಳಿಲ್ಲವೆಂದರೆ ಸರಿಯಲ್ಲ. ನಿ.ಪಿ.17 ರ ಪ್ರಕಾರ ನನ್ನ ಮಗ ಯಾವ ಕಾರಣಕ್ಕಾಗಿ ತರಭೇತಿಗೆ ಹಾಜರಾಗಿಲ್ಲವೆಂದು ತಿಳಿಸದೇ ಇದುದ್ದರಿಂದ ಕಾಲೇಜಿನವರು 3 ಬಾರಿ ನನ್ನ ಮಗನಿಗೆ ನೋಟೀಸ್ ಕೊಟ್ಟಿದ್ದರೂ ಸಹ ನನ್ನ ಮಗ ಕಾಲೇಜಿಗೆ ಹಾಜರಾಗಿಲ್ಲವೆಂದು ಹೇಳಲಾಗಿದೆ ಎಂದರೆ ಸಾಕ್ಷಿದಾರರು ತಮಗೆ ಯಾವುದೇ ನೋಟೀಸ್ ಬಂದಿಲ್ಲ ಹಾಗೂ ತಾವು ತಮ್ಮ ಮಗನಿಗೆ ರಸ್ತೆ ಅಪಘಾತದಲ್ಲಿ ಗಾಯ ಆದ ಕಾರಣ ಕಾಲೇಜಿಗೆ ಹಾಜರಾಗಲು ಆಗುವುದಿಲ್ಲವೆಂದು ಬರವಣಿಗೆಯಲ್ಲಿ ಮಾಹಿತಿಯನ್ನು ಕಾಲೇಜುದಾರರಿಗೆ ಕೊಟ್ಟಿಲ್ಲವೆಂದು ಹೇಳುತ್ತಾರೆ. ನನ್ನ ಮಗನಿಗೆ ಓದು ಮುಂದುವರೆಸಿಕೊಂಡು ಹೋಗಲು ಆಸಕ್ತಿ ಇಲ್ಲದೇ ಇದುದ್ದರಿಂದ ನನ್ನ ಮಗ ಕಾಲೇಜಿಗೆ ಹೋಗಿಲ್ಲವೆಂದರೆ ಸರಿಯಲ್ಲ. ಯಾವುದೇ ವೈದ್ಯರು ನನ್ನ ಮಗ 2 ವರ್ಷ ವಿಶ್ರಾಂತಿ ತೆಗೆದುಕೊಳ್ಳಬೇಕು ಎಂದು ಬರವಣಿಗೆಯಲ್ಲಿ ಬರೆದುಕೊಟ್ಟಿಲ್ಲವೆಂದರೆ ಸರಿ. ನನ್ನ ಮಗನಿಗೆ ಕಾಲಿಗೆ ಹೊರತುಪಡಿಸಿ ಬೇರೆ ಎಲ್ಲಿಯೂ ಗಾಯಗಳಾಗಿಲ್ಲವೆಂದರೆ ಸರಿ. ಈಗ ನನ್ನ ಮಗನ ಕಾಲಿಗೆ ಆದ ಗಾಯಗಳು ವಾಸಿಯಾಗಿದೆ ಎಂದರೆ ಸರಿ. ನನ್ನ

ಮಗನ ಚಿಕಿತ್ಸೆಗೆ ಸುಮಾರು ರೂ.**5,00,000**/- ಖರ್ಚು ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ.**18** ರ ಅಡಿ ಇರುವ ಆಸ್ಪತ್ರೆ ಮತ್ತು ಔಷಧಿ ಬಿಲ್ ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನನ್ನ ಮಗನ ಕಾಲಿಗೆ ಆದ ಗಾಯಗಳು ಸಂಪೂರ್ಣವಾಗಿ ವಾಸಿಯಾಗಿದ್ದರಿಂದ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ **4** ನೇ ಖಂಡಿಕೆಯಲ್ಲಿ ಹೇಳಿರುವ ಯಾವುದೇ ತೊಂದರೆಗಳು ಅರ್ಜಿದಾರರಿಗೆ ಇರುವುದಿಲ್ಲವೆಂದರೆ ಸರಿಯಲ್ಲ.

ನನ್ನ ಮಗ ಐ.ಟಿ.ಐ ನಲ್ಲಿ ಫಿಟ್ಟರ್ ಟ್ರೇಡನ್ನು ಆರಿಸಿಕೊಂಡಿದ್ದ. ನನ್ನ ಮಗನ ಕಾಲೇಜಿನ ಸಮಯ ಬೆಳಗ್ಗೆ **10.00** ರಿಂದ ಮಧ್ಯಾಹ್ನ **03.00** ಗಂಟೆಯವರೆಗೂ ಇರುತ್ತಿತ್ತು. ನನ್ನ ಮಗ ಏನೂ ಕೆಲಸ ಮಾಡುತ್ತಿರಲಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ **5** ನೇ ಖಂಡಿಕೆಯಲ್ಲಿ ಹೇಳಿರುವ ವಿಷಯಗಳೆಲ್ಲವು ಸುಳ್ಳು ಇರುತ್ತದೆಂದರೆ ಸರಿಯಲ್ಲ. ನಾನು ಟಿವಿ ಕೇಬಲ್ ನೆಟ್ ವರ್ಕ್ ಕೆಲಸ ಮಾಡುತ್ತಿದ್ದೆ, ನನ್ನ ಮಗನಿಗೆ ಈ ಅಪಘಾತದಲ್ಲಿ ಗಾಯವಾದ ಕಾರಣದಿಂದ ನನ್ನ ಮಗನನ್ನು ನೋಡಿಕೊಳ್ಳಲು ರಜೆ ಹಾಕಿದ್ದೆ ಆದ್ದರಿಂದ ನನಗೆ ಆರ್ಥಿಕವಾಗಿ ಒಂದು ವರ್ಷದವರೆಗೂ ನಷ್ಟವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತ ಆಗುವುದಕ್ಕಿಂತ ಮೊದಲು ನನ್ನ ಮಗ ಹೇಗೆ ಇದ್ದ ಈಗಲೂ ಸಹ ಹಾಗೇಯೇ  ಇದ್ದಾನೆಂದರೆ ಸರಿಯಲ್ಲ. ನನ್ನ ಮಗನಿಗೆ ಆದ ಗಾಯದಿಂದ ಅಂಗನ್ಯೂನ್ಯತೆ ಉಂಟಾಗಿದೆ ಎಂದು ವೈದ್ಯರು ಯಾವುದೇ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಕೊಟ್ಟಿಲ್ಲವೆಂದರೆ ಸರಿ. ಈ ಅಪಘಾತದಿಂದ ನಮಗೆ ಯಾವುದೇ ರೀತಿಯಿಂದ ಮಾನಸಿಕವಾಗಿ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ಯಾವುದೇ ತೊಂದರೆ ಉಂಟಾಗಿಲ್ಲವೆಂದರೆ ಸರಿಯಲ್ಲ. ಈ ಅಪಘಾತವು ನನ್ನ ಮಗನ ನಿರ್ಲಕ್ಷ್ಯತನದಿಂದ ಸಂಭವಿಸಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ **1** ನೇ

ಎದುರುದಾರರ ಕಾರ್ ಚಾಲಕನ ಮೇಲೆ ಸುಳ್ಳು ದೂರನ್ನು ಕೊಟ್ಟಿಲ್ಲ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲ್ಪಟ್ಟಿದೆ)

(ಓ.ಹೆ.ಕೆ.ಸ.ಇ.)

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು